ಸೇವೆಯಲ್ಲಿ ಕೆಲಸ ಮಾಡುವವರನ್ನು ಎಷ್ಟು ಕಂಡಿದ್ದಿದೆಯೋ ಅಷ್ಟೇ ಕೆಲಸ ಮಾಡದವರನ್ನೂ ಕಂಡಿದ್ದಿದೆ. ಡೆಲಿವರಿ ದಿನದ ಆಜು ಬಾಜು ಅಜ್ಜಿಯ ಸಾವು, ಮಕ್ಕಳ ಇಂಜೆಕ್ಷನ್ ಡ್ರಾಪ್ಸ್, ಕಣ್ಣು ಬೇನೆ, ಹೆಂಡತಿಗೆ ಹುಷಾರಿಲ್ಲ, ಮೇಡ್ ಬಂದಿಲ್ಲ ಎಂದು ಹೇಳಿ ಕೆಲಸವನ್ನು ತಪ್ಪಿಸಿಕೊಳ್ಳುವ, ನಾಳೆ ತುಂಬಾ ಕೆಲಸವಿದೆ ಎಂದು 'ವರ್ಕ್ ಫ್ರಮ್ ಹೋಮ್' ತೆಗೆದುಕೊಳ್ಳುವ ಇನ್ನೊಂದು ಗುಂಪು ಎಂದು ಹೇಳುವುದಕ್ಕಿಂತ ಇನ್ನೊಂದು ಸಾಗರ, ಇನ್ನೊಂದು ಕಡೆಗೆ ಕೆಲಸದ ಸಂದರ್ಶನಕ್ಕೆ ಹೋಗಿ, ಹೋದ ಕಂಪೆನಿಯಲ್ಲಿ ಸಂದರ್ಶನ ತೆಗೆದುಕೊಳ್ಳುವವ ತನ್ನ ಹಳೆಯ ಸ್ನೇಹಿತನಾಗಿ ಆತ ಮೊಬೈಲ್ ಕರೆ ಮಾಡಿ ನಿನ್ನವ ನನ್ನ ಎದುರು ಕುಂತಿದ್ದಾನೆ ಎನ್ನುವ ಘಟನೆಗಳು, ಜ್ವರ ಬಂದಿದೆ ಎಂದು ಹೇಳಿ ರಜೆ ಗುಜರಾಯಿಸಿ ಸಂಜೆ ತಾನು ಅವರನ್ನು ಯಾವುದೋ ಮಾಲಿನಲ್ಲೋ ಏರ್‌ಪೋರ್ಟಿನಲ್ಲೋ ಸಿಕ್ಕಿ, 'ಈಗ ಆರೋಗ್ಯ ಹೇಗಿದೆ' ಎಂದು ಕೇಳಿ ಆಗ ರಜೆ ಹಾಕಿದವನಿಗೇ ಏನು ಹೇಳಿದ್ದೇನೆ, ಯಾವ ಸುಳ್ಳು ಹೇಳಿದ್ದೇನೆ ಎನ್ನುವುದೇ ಮರೆತು ಹೋಗಿ, 'ಏನು... ಆರೋಗ್ಯ?' ಎಂದು ಒಮ್ಮೆ ಕೇಳಿ ನಂತರ ಪರಿಸ್ಥಿತಿ ಅರ್ಥವಾಗಿ ಕಾಲುಜಾರಿದವರೇ ಹೆಚ್ಚು. ಸರಿಯಾದ ಸಮಯಕ್ಕೆ ತನ್ನ ರಜೆ ವಿಷಯ ತಿಳಿಸದೇ, ಲೀವ್ ಅಪ್ಲೈನೂ ಮಾಡದೇ ಕೇಳಿದಾಗ 'ನಾನು ಫೋನ್ ಮಾಡಿದ್ದೆ ನೀವು ಎತ್ತಲಿಲ್ಲ, ಬ್ಯುಸಿ, ಎಂಗೇಜ್ ಹಾಗೆ ಹೀಗೆ' ಇತ್ಯಾದಿಯಿಂದ ಗುರುಪಾದ ಯಾರಾದರೂ ಸತ್ಯ ಹೇಳಿದರೂ ಅವರನ್ನು ನಂಬುವ ಸ್ಥಿತಿಯಲ್ಲಿರಲಿಲ್ಲ. ಹಾಗಾಗೇ ಕೆಲವು ಒಳ್ಳೆಯವರಿಗೂ ಗುರುಪಾದ ಬೇಜಾರು ಮಾಡಿದ್ದಿದೆ.

ನಾನು ಕೆಲಸದ ಹಂಚಿಕೆಯ ಬಗ್ಗೆ ವಿಚಾರಮಾಡುವ ಮೊದಲೇ ಸೆವೆಂತ್‌ಸೆನ್ಸಾಗಿ ಬಂದು ನನ್ನನ್ನು ತಡೆದು, ನಾನು ಬೇಕಿದ್ದರೆ ಭಾನುವಾರವೂ ಬರುತ್ತೇನೆ ಎಂದು ಹೇಳಿ, ನನ್ನನ್ನೂ ನಂಬಿಸಿ ಈ ರೀತಿ ಕೈ ಕೊಡುವುದೇ, ಅವಳು ಮಾಡುತ್ತಿದ್ದ ಕೆಲಸಕ್ಕೆ ಆ ಪ್ರೊಜೆಕ್ಟ್ ಇತಿಹಾಸವಿಲ್ಲವೆ? ಅದನ್ನು ಹೇಗೆ ಈ ಹೊಸ ಕೆಲಸದವನು ನಿಭಾಯಿಸಿಯಾನು?... ಎಂದೆಲ್ಲ ಗುರುಪಾದನ ತಲೆಗೆ ಬಂತು. ಈ ದೇಶದಲ್ಲಿ ಸಿಟ್ಟುಮಾಡಿಕೊಂಡು ತೋರಿಸಿಕೊಳ್ಳುವ ಪ್ರಮೇಯವೂ ಅಷ್ಟಕ್ಕಷ್ಟೇ ಎಂದುಕೊಳ್ಳುತ್ತಾ ಗುರುಪಾದ ಪ್ರೊಜೆಕ್ಟ್ ಮೀಟಿಂಗ್‌ನ ಮಧ್ಯದಲ್ಲೇ ಎದ್ದುನಡೆದು ಅವಳ ಮ್ಯಾನೇಜರ್‌ನ ಹತ್ತಿರ ಮಾತನಾಡಿದ. ಅಷ್ಟು ಸಮರ್ಪಕವಾದ ಉತ್ತರ ಸಿಗಲಿಲ್ಲ. ಆದರೆ, ಪ್ರೊಜೆಕ್ಟ್ ಡೆಲಿವರಿ ಮಾಡುವ ಜವಾಬ್ದಾರಿಯಿಂದ ಮಾತ್ರ ಆತ ಹಿಂದೆ ಸರಿಯಲಿಲ್ಲ.

ಇಲ್ಲಿ ಇನ್ನೊಂದು ಚಾಳಿಯಿದೆ, ಕಂಪೆನಿಯ ವಾರ್ಷಿಕ ಬೋನಸ್‌ಗಾಗಿ ಎಲ್ಲರೂ ಪೂರ್ತಿ ಕಾಯುತ್ತಿರುತ್ತಾರೆ. ಯಾವಾಗ ಅದು ಸಿಕ್ಕಿತೊ ಒಮ್ಮಿಂದೊಮ್ಮೆಲೇ ಮೂರುವಾರದ ಅನಾರೋಗ್ಯದ ಕಾರಣ ರಜೆ ಹಾಕಿ, ಅದನ್ನು ಮುಗಿಸಿಬಂದ ದಿನವೇ ರಾಜೀನಾಮೆ ಇತ್ತು ಒಂದೆ ದಿನದಲ್ಲಿ ಕಂಪೆನಿಯಿಂದ ಹೊರಟುಬಿಡುತ್ತಾರೆ. ಸೀಯೊನ್ ಹಾಗೆ ಮಾಡಲು ಹೊರಟಿದ್ದಾಳೆ, ಅಥವಾ ಎರಡು ತಿಂಗಳ ಹಿಂದೆ ಒಂದು ಭಾನುವಾರ ಹಳೆಯ ಪ್ರೊಜೆಕ್ಟ್ ಕೆಲಸವನ್ನು ಮುಗಿಸಲು ಬಂದು ಎಲ್ಲರೂ ಊಟಕ್ಕೆ ಹೋಗಿದ್ದಾಗ ಮಾತನಾಡುತ್ತಾ, 'ನಮ್ಮ ಮೂಲ ಚೈನಾ, ನನ್ನ ತಾಯಿ ಚೈನಾದವಳು, ಅವಳು ಗಟ್ಟಿಗಿತ್ತಿ, ನನ್ನ ತಂದೆ ಕೊರಿಯಾದವನು, ನನ್ನ ಅಣ್ಣ ಮಿಲಿಟರಿಯಲ್ಲಿ ಕುಕ್... ಆತ ಬಂದ ಮೇಲೆ ನಾನು ಅವನು ಜೊತೆ ಸೇರಿ ಒಂದು ಒಳ್ಳೆಯ ರೆಸ್ಟೋರೆಂಟ್ ಮಾಡುತ್ತೇವೆ' ಎಂದಿದ್ದಳು. ಹಾಗೂ ಆಗಲಿಕ್ಕೆ ಸಾಕು. ಹೀಗೆ ಹಲವು ಅವಳ ಭವಿಷ್ಯದ ದಾರಿಗಳು ಗುರುಪಾದನಿಗೆ ತೋರುತ್ತಿದ್ದವು. ಆದರೆ, ಸಿಟ್ಟು ಮಾತ್ರ 'ಈ ಸೋಮವಾರದ ಡೆಲಿವರಿ ಮುಗಿಸಿ ಸರಿಯಾದ ಸಮಯ ತೆಗೆದುಕೊಂಡು ಅವಳಂದುಕೊಂಡಂತೇ ಮಾಡಬಹುದಿತ್ತಲ್ಲಾ... ನಾವೇನು ಗೇಟು ಬಂದು ಮಾಡಿಕೊಂಡೇನು